ಖೋಟಾ 154, ಕೊಟ್ಟ ಲೈಸನ್ಸ್‌ಗಳ ಸಂಖ್ಯೆ 136. ಈ ಮೇಲಿನ ಅಂಕೆಸಂಖ್ಯೆಗಳ ಪ್ರಕಾರ ಕೊಟ್ಟಿರುವ ಲೈಸೆನ್ಸ್‌ಗಳ ಸಂಖ್ಯೆಯಾಗಿದೆ. ನೀತಿಯ ಪ್ರಕಾರ 1991ರ ಜನಗಣತಿಯ ಪ್ರಕಾರ 1988ರಲ್ಲಿ ಗೊತ್ತುಪಿಡಿಸಿದ ಸಂಖ್ಯೆಗಿಂತ ಇನ್ನೂ ಹೆಚ್ಚಿನ ಅಂಗಡಿಗಳಲ್ಲಿ ಲೈಸೆನ್ಸ್‌ನ್ನು ಕೊಡಬಹುದಾಗಿದ್ದರೂ ಸಹ 88ರಲ್ಲಿ ಗೊತ್ತಾದ ಖೋಟಾಗಿಂತಲೂ ಕಡಿಮೆ ಲೈಸೆನ್ಸ್‌ಗಳನ್ನು ಕೊಡಲಾಗಿದೆ. ಸಿಎಲ್-9 ಬಾರ್ ಮತ್ತು ರೆಸ್ಟೋರೆಂಟ್‌ಗಳಿಗೆ ಇಂತಿಷ್ಟೇ ಎಂಬ ಖೋಟಾ ನಿಯಮ ಇರುವುದಿಲ್ಲ. ಇತ್ತೀಚೆಗೆ ಕೆಲವು ಅಂಗಡಿಗಳಲ್ಲಿ ವ್ಯವಸ್ಥಿತವಾಗಿರುವ ಸ್ಥಳಗಳು ಅನಪೇಕ್ಷಿತ ಸ್ಥಳಗಳು ಇವೆ ಎಂದು ಈ ಮನೆಯ ಮಾನ್ಯ ಸದಸ್ಯರು ಮತ್ತು ಸಾರ್ವಜನಿಕರಿಂದಲೂ ದೂರುಗಳು ಬಂದಿದ್ದು ಇಂತಹ ಸ್ಥಳಗಳನ್ನು ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿ ಅನಪೇಕ್ಷಿತ ಸ್ಥಳಗಳಲ್ಲಿ ಇದ್ದರೆ ಅಂತರ ಸ್ಥಳಗಳಿಂದ ಅವುಗಳನ್ನು ಬೇರೆ ಸ್ಥಳಗಳಿಗೆ ವರ್ಗಾಹಿಸಲು ತಕ್ಷಣ ಕ್ರಮ ಕೈಗೊಳ್ಳಬೇಕೆಂದು ಅಬ್ಕಾರಿ ಕಮಿಷನ್‌ರವರಿಗೆ ಈಗಾಗಲೇ ಆದೇಶ ನೀಡಲಾಗಿದೆ. ಅಬ್ಕಾರಿ ಕಮಿಷನ್‌ರವರು ಸಹ ಈ ಸಂಬಂಧದಲ್ಲಿ ಅಗತ್ಯ ಸುತ್ತೋಲೆಯೊಂದನ್ನು ಕಳುಹಿಸಿದ್ದಾರೆ.

(3)ಗುಲ್ಬರ್ಗಾ ಜಿಲ್ಲೆಯ ಸೇಡಂ ನಗರದ ಸಮೀಪದಲ್ಲಿರುವ ಸೀಮೆಂಟ್ ಕಾರ್ಖಾನೆಗಳಿಂದ ಹೊರಸೂಸುವ ಹೊಗೆಯಿಂದ ಜನರ ಆರೋಗ್ಯದ ಮೇಲುಂಟಾಗುವ ದುಷ್ಪರಿಣಾಮವನ್ನು ತಪ್ಪಿಸುವ ಬಗ್ಗೆ.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ):- ಮಾನ್ಯ ಉಪಾಧ್ಯಕ್ಷಿಣಿಯವರೇ, ಗುಲ್ಬರ್ಗಾ ಜಿಲ್ಲೆಯ ಸೇಡಂ ನಗರದ ಸಮೀಪವಿರುವ ವಾಸವದತ್ತಾ ಹಾಗೂ ಮಲಖೇಡ ಸಮೀಪವಿರುವ ರಾಜಶ್ರೀ ಇತ್ಯಾದಿ, ಸಿಮೆಂಟ್ ಕಾರ್ಖಾನೆಗಳ ಹೊರಬರುವ ಹೊಗೆ, ಅನಿಲ, ಧೂಳಿನಿಂದ ಸುತ್ತಮುತ್ತಲಿನ ಗ್ರಾಮಗಳ ಜನರ ಆರೋಗ್ಯದ ಮೇಲೆ, ದನಕರುಗಳ ಆರೋಗ್ಯದಮೇಲೆ ಹಾಗೂ ಬೆಳೆಗಳ ಮೇಲೆ ದುಷ್ಪರಿಣಾಮ ಬೀಳುವ ಬಗ್ಗೆ ಪ್ರಶ್ನೆಗಳನ್ನು ಕೇಳಿ ಪತ್ರವ್ಯವಹಾರ ಮಾಡಿದರೆ, ಆಯುಕ್ತರು, ಸರ್ಕಾರದ ಕಾರ್ಯದರ್ಶಿ, ವಿಜ್ಞಾನ ಯಂತ್ರಕಲಾ ಮತ್ತು ಇಂಧನ ಇಲಾಖೆಯವರು ತಮ್ಮ ಪತ್ರ ನಂ. ಸಿಎಸ್‌ಇಟಿ 85-91 ದಿನಾಂಕ: 12-3-91 ರಂದು ಅಧ್ಯಕ್ಷರು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯವರಿಗೆ ವರದಿಯನ್ನು ಸಲ್ಲಿಸಲು ಕೋರಿದರೆ ಯಾವ ಕ್ರಮವೂ ಇಲ್ಲ. ಅಲ್ಲದೆ ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕಾ ಮಂತ್ರಿಗಳ ಪತ್ರ ನಂ. ಎಂಎಂಐಎಲ್:6198:90 ದಿನಾಂಕ 26-11-91 ರಂದು ಮಾನ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಪರಿಸರ ಖಾತೆ ಸಚಿವರು ಹಾಗೂ ಆಯುಕ್ತರು ಹಾಗೂ ಕಾರ್ಯದರ್ಶಿಗಳು ವಿಜ್ಞಾನ ಮತ್ತು ತಂತ್ರಜ್ಞಾನ ಜೀವಿ ಖಾತೆ ಪರಿಸರ ಇಲಾಖೆಯವರಿಗೆ, ಜಿಲ್ಲಾಧಿಕಾರಿಗಳು ಹಾಗೂ ಶಾಸಕರ ಸಮಕ್ಷಮದಲ್ಲಿ ಸ್ಥಳ ತನಿಖೆಮಾಡಿ ಕೂಲಂಕಷವತದಿ ತರಿಸಿ ಗಂಭೀರವಾದ ಕ್ರಮ ಕೈಗೊಳ್ಳಲು ಕೋರಿದ್ದಾರೆ. ಯಾವ ಕ್ರಮವೂ ಇದುವರೆಗೂ ಇಲ್ಲದಿರುವುದಕ್ಕೆ ಕಾರಣವೇನು ? ಇದರಿಂದ ದಿನನಿತ್ಯ ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಬಿದ್ದು ಕ್ಷಯ ಹಾಗೂ ಕ್ಯಾನ್ಸರ್ ಇತ್ಯಾದಿ ರೋಗಗಳಿಗೆ ಒಳಗಾಗುವ ಪರಿಸ್ಥಿತಿ ಉಂಟಾಗಿ ಮತ್ತು ಪ್ರತಿವರ್ಷ ಈ ಧೂಳಿನಿಂದ ಆ ಭಾಗದ ಜನರ ಆರೋಗ್ಯ ಮುಖ್ಯವೇ ? ಅಥವಾ ಕಾರ್ಖಾನೆಗಳವರು ಗಳಿಸುವ ಲಾಭ ಮುಖ್ಯವೇ ? ಈ ಹೊಗೆಯ ಧೂಳಿನಿಂದ ದುಷ್ಪರಿಣಾಮ ತಪ್ಪಿಸುವ ವ್ಯವಸ್ಥೆ ಆಗುವವರೆಗೆ ಕಾರ್ಖಾನೆಗಳನ್ನು ಮುಚ್ಚಿಸುವ ವ್ಯವಸ್ಥೆಮಡಿ ಜನರ ಆರೋಗ್ಯವನ್ನು ಕಾಪಾಡಲು ಸರ್ಕಾರದ ಗಮನವನ್ನು ಸೆಳೆಯುತ್ತಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು) (ಪರಿಸರ ಮಾಲಿನ್ಯ ನಿಯಂತ್ರಣ ಖಾತೆ ಸಚಿವರ ಪರವಾಗಿ):- ಮಾನ್ಯ ಉಪಾಧ್ಯಕ್ಷಿಣಿಯವರೇ, ಮಾನ್ಯ ಸದಸ್ಯರಾದ ಬಸವಂತರೆಡ್ಡಿ ಮೋತಕಪಲ್ಲಿಯವರು ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಪರಿಸರ ಮಾಲಿನ್ಯ ನಿಯಂತ್ರಣ ಮಂತ್ರಿಗಳ ಗಮನವನ್ನು ಸೆಳೆದಿದ್ದಾರೆ. ಈ ವಿಚಾರವನ್ನು ನಾನು ಅವರ ಗಮನಕ್ಕೆ ತಂದು ಸೂಕ್ತ ಕಾರ್ಯಾಚರಣೆ ಕೈಗೊಳ್ಳಲು ತಿಳಿಸುತ್ತೇನೆ.

3.45 ಪಿ. ಎಂ.

(4) ಲೋಕಸೇವಾ ಆಯೋಗ ನಡೆಸಿದ ಇಲಾಖಾ ಪರೀಕ್ಷೆಯಲ್ಲಿ ತಪ್ಪು ಪ್ರಶ್ನೆ ಪತ್ರಿಕೆಯನ್ನು